# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 90 (113) |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರು |
| ಉತ್ತರಿಸುವ ದಿನಾಂಕ | 27.01.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶದ ನಿವೇಶನಗಳಿಗೆ ವಿನ್ಯಾಸ / ಅನುಮೋದನೆ ನೀಡುವ ಅಧಿಕಾರವನ್ನು ಸ್ಥಳೀಯ ನಗರ ಯೋಜನಾ ಪ್ರಾಧಿಕಾರಗಳಿಗೆ ವಹಿಸಿದ ನಂತರ ವಿನ್ಯಾಸ ಅನುಮೋದನೆ ಕೋರಿ ಸಲ್ಲಿಕೆ ಆದ ಅರ್ಜಿಗಳು ಎಷ್ಟು; ಎಷ್ಟು ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ; ಬಾಕಿ ಎಷ್ಟು ಇವೆ;(ಪ್ರಾಧಿಕಾರವಾರು ಮಾಹಿತಿ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶದ ನಿವೇಶನಗಳಿಗೆ ವಿನ್ಯಾಸ ಅನುಮೋದನೆ ನೀಡುವ ಅಧಿಕಾರವನ್ನು ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ವಹಿಸಿದ ನಂತರ ವಿನ್ಯಾಸ ಅನುಮೋದನೆ ಕೋರಿ ಸಲ್ಲಿಕೆ ಆದ ಅರ್ಜಿಗಳು ಮತ್ತು ಅನುಮೋದನೆ ನೀಡಲಾದ ಅರ್ಜಿಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| (ಆ) | ಸದರಿ ಜಿಲ್ಲೆಗಳಲ್ಲಿ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ಮತ್ತು ಸ್ವಾಧೀನ ಪತ್ರದ ದೃಢೀಕರಣ ಪತ್ರ ಕೋರಿ ಸಲ್ಲಿಕೆಯಾದ ಅರ್ಜಿಗಳು ಎಷ್ಟು; ಅನುಮೋದನೆ ನೀಡಿದ ಮತ್ತು ಬಾಕಿ ಅರ್ಜಿಗಳು ಎಷ್ಟು;(ನಗರ ಯೋಜನ ಪ್ರಾಧಿಕಾರವಾರು ಮಾಹಿತಿ ನೀಡುವುದು) | ಸದರಿ ಜಿಲ್ಲೆಗಳಲ್ಲಿ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ಕೋರಿ ಸಲ್ಲಿಕೆಯಾದ ಅರ್ಜಿಗಳು ಮತ್ತು ಅನುಮೋದನೆ ನೀಡಲಾದ ಅರ್ಜಿಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| (ಇ) | ಗ್ರಾಮೀಣ ಭಾಗದಿಂದ ನಗರ ಯೋಜನಾ ಪ್ರಾಧಿಕಾರಗಳಿಗೆ ವಿನ್ಯಾಸ ಅನುಮೋದನೆ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ಮತ್ತು ಸ್ವಾಧೀನ ಪತ್ರಿಕೆ ದೃಢೀಕರಣ ಕೋರಿ ಸಲ್ಲಿಕೆಯಾಗುವ ಅರ್ಜಿಗಳ ವಿಲೇವಾರಿಗೆ ಮೇಲುಸ್ತುವಾರಿ ವಹಿಸುವ ಪ್ರಾಧಿಕಾರ ಯಾವುದು; ಸದರಿ ಅರ್ಜಿಗಳ ವಿಲೇವಾರಿಯನ್ನು ಸಕಾಲ ಕಾಯ್ದೆ ಅಡಿ ಅಳವಡಿಸಲು ಸರ್ಕಾರಕ್ಕೆ ಇರುವ ಅಡ್ಡಿ ಏನು; | ಕರ್ನಾಟಕ ಸರ್ಕಾರದ ಹೊಸ ಸೇವೆಗಳ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಸಿಆಸುಇ 12 ಎಸ್‌ಎಸ್ಎಂ 2025, ದಿನಾಂಕ:01-07-2025 ರಲ್ಲಿ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು, ಸ್ವತಂತ್ರ ಯೋಜನಾ ಪ್ರಾಧಿಕಾರಗಳು ಹಾಗೂ ಮುನಿಸಿಪಲ್ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ವಿನ್ಯಾಸ ಅನುಮೋದನೆ ಪ್ರಕ್ರಿಯೆಯನ್ನು ಕರ್ನಾಟಕ ಸರ್ಕಾರವು ಸಕಾಲ ಯೋಜನೆಯಡಿ ವಿನ್ಯಾಸ ಅನುಮೋದನೆ ನೀಡಲು ಹೊಸ ಸೇವೆಗಳನ್ನು ಸೇರ್ಪಡೆಗೊಳಿಸಿ ಹಾಗೂ ಸದರಿ ಸೇವಾ ಅರ್ಜಿಯನ್ನು ಇತ್ಯರ್ಥಗೊಳಿಸಲು 90 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಿ ಆದೇಶಿಸಿದೆ.<br><br>ಕರ್ನಾಟಕ ಸರ್ಕಾರದ ಹೊಸ ಸೇವೆಗಳ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಸಿಆಸುಇ 80 ಎಸ್ಎಎಂಎಸ್ 2023/3, ದಿನಾಂಕ:19-06-2025 ರಲ್ಲಿ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು, ಸ್ವತಂತ್ರ ಯೋಜನಾ |

| | | |
|---|---|---|
| | | ಪ್ರಾಧಿಕಾರಗಳು ಹಾಗೂ ಮುನಿಸಿಪಲ್ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಕಟ್ಟಡ ಲೈಸೆನ್ಸ್ ನೀಡಲು ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ನೆರವು ಪ್ರಕ್ರಿಯೆಯನ್ನು, ಸಕಾಲ ಯೋಜನೆಯಡಿ ನೀಡಲು ಹೊಸ ಸೇವೆಗಳನ್ನು ಸೇರ್ಪಡೆಗೊಳಿಸಲಾಗಿದೆ ಹಾಗೂ ಸದರಿ ಸೇವಾ ಅರ್ಜಿಯನ್ನು ಇತ್ಯರ್ಥಗೊಳಿಸಲು 90 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಿ ಆದೇಶಿಸಿದೆ.<br><br>ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗೆ ತಾಂತ್ರಿಕ ಅನುಮೋದನೆ ನೀಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದಿಂದ ದಿನಾಂಕ: 12.09.2025 ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ. |
| (ಈ) | ಸದರಿ ಅರ್ಜಿಗಳು ವಿವಿಧ ಇಲಾಖೆಗಳಿಗೆ ಹೋಗಬೇಕಾದ ಕಾರಣ ವಿಲೇವಾರಿಗೆ ವಿವಿಧ ಇಲಾಖೆಗಳಿಗೆ ಕಾಲಮಿತಿ ನಿಗಧಿಪಡಿಸಿ ಪ್ರಾಮಾಣಿಕ ಕಾರ್ಯ ನಿರ್ವಹಣೆ ವಿಧಾನ (SOP) ಹೊರಡಿಸಲಾಗಿದೆಯೇ;<br>ಇಲ್ಲದಿದ್ದಲ್ಲಿ, ಈ ಬಗ್ಗೆ ಕ್ರಮವಹಿಸದಿರಲು ಕಾರಣವೇನು? | ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಏಕ / ಬಹು ನಿವೇಶನ ವಿನ್ಯಾಸ ಅನುಮೋದನೆ ನೀಡುವ ಕುರಿತು ನಿಯಮಗಳನ್ನು ಸಮನ್ವಯಗೊಳಿಸಲು ಮತ್ತು ಅನುಮೋದನಾ ಪ್ರಕ್ರಿಯೆಯನ್ನು ಸುಗಮಗೊಳಿಸಲು ಹಾಗೂ ವಿನ್ಯಾಸ ಅನುಮೋದನೆಯನ್ನು ಪಾರದರ್ಶಕತೆ ಹಾಗೂ ಜನಸ್ನೇಹಿಯಾಗಿಸಲು ಅನುವಾಗುವಂತೆ Centre for E-Governance ವತಿಯಿಂದ Unified Land Management System ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. |
| (ಉ) | ಸದರಿ ಜಿಲ್ಲಾ ವ್ಯಾಪ್ತಿಯಲ್ಲಿರುವ ನಗರ ಯೋಜನಾ ಪ್ರಾಧಿಕಾರಗಳಿಗೆ ಮಂಜೂರಾದ ಒಟ್ಟು ಹುದ್ದೆ ಭರ್ತಿಗೊಳಿಸಿದ ಮತ್ತು ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ನಗರ ಯೋಜನಾ ಪ್ರಾಧಿಕಾರಗಳಿಗೆ ಮಂಜೂರಾದ ಒಟ್ಟು ಹುದ್ದೆ ಭರ್ತಿಗೊಳಿಸಿದ ಮತ್ತು ಖಾಲಿ ಇರುವ ಒಟ್ಟು ಹುದ್ದೆಗಳ ವಿವರವನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| (ಊ) | ಸದರಿ ಸ್ಥಳೀಯ ಯೋಜನಾ ಪ್ರಾಧಿಕಾರಗಳಲ್ಲಿ ಮಧ್ಯವರ್ತಿಗಳ ಹಾವಳಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಾರ್ವಜನಿಕರ ಅರ್ಜಿಗಳ ವಿಲೇವಾರಿಗೆ FIFO ವ್ಯವಸ್ಥೆ ಅಳವಡಿಸಲಾಗಿದೆಯೇ; ಸದರಿ | ಸದರಿ ಸಮಸ್ಯೆಯನ್ನು ನಿವಾರಿಸುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4-ಕೆ ರಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆಯಲ್ಲಿ ಬರುವ ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು |

| | | |
|---|---|---|
| | ಪ್ರಾಧಿಕಾರಗಳಲ್ಲಿ ಸಾರ್ವಜನಿಕರ ಕುಂದು ಕೊರತೆ ನಿರ್ವಹಣೆ ಪ್ರಾಧಿಕಾರ ಯಾವುದು; ಕಳೆದ ಎರಡು ವರ್ಷಗಳಲ್ಲಿ ಸಾರ್ವಜನಿಕರ ಹಿತಕ್ಕಾಗಿ ಸದರಿ ಪ್ರಾಧಿಕಾರ ಕೈಗೊಂಡ ಕ್ರಮಗಳು ಯಾವುವು? | ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗೆ ತಾಂತ್ರಿಕ ಅನುಮೋದನೆ ನೀಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದಿಂದ ದಿನಾಂಕ: 12.09.2025 ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ. ಹಾಗೂ ಸದರಿ ಜಿಲ್ಲೆಗಳನ್ನು ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಏಕ / ಬಹು ನಿವೇಶನ ವಿನ್ಯಾಸ ಅನುಮೋದನೆ ನೀಡುವ ಕುರಿತು ನಿಯಮಗಳನ್ನು ಸಮನ್ವಯಗೊಳಿಸಲು ಮತ್ತು ಅನುಮೋದನಾ ಪ್ರಕ್ರಿಯೆಯನ್ನು ಸುಗಮಗೊಳಿಸಲು ಹಾಗೂ ವಿನ್ಯಾಸ ಅನುಮೋದನೆಯನ್ನು ಪಾರದರ್ಶಕತೆ ಹಾಗೂ ಜನಸ್ನೇಹಿಯಾಗಿಸಲು ಅನುವಾಗುವಂತೆ Centre for E-Governance ವತಿಯಿಂದ Unified Land Management System ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 29 ಮೈಅಪ್ರಾ 2026

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

## ಅನುಬಂಧ-1

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ ನಿರ್ವಹಿಸಿದ ಒಟ್ಟು ಕಡತಗಳು, ತಿರಸ್ಕರಿಸಿದ ಕಡತಗಳು ಹಾಗೂ ವಿಲೇವಾರಿಗೆ ಬಾಕಿಯಿರುವ ಕಡತಗಳ ಸಂಖ್ಯೆಯ ವಿವರಗಳು:**

**ದಕ್ಷಿಣ ಕನ್ನಡ ಜಿಲ್ಲೆ**

| ಕ್ರ. ಸಂ. | ಕಛೇರಿಗಳ ಹೆಸರು | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಅನುಮೋದನೆ ನೀಡಿರುವ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ |
|---|---|---|---|---|---|---|
| 1. | ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | 1230 | 515 | 175 | 515 | 25 |
| 2. | ಪುತ್ತೂರು ಯೋಜನಾ ಪ್ರಾಧಿಕಾರ | 1794 | 1059 | 238 | 407 | 90 |
| 3. | ಬಂಟ್ವಾಳ ಯೋಜನಾ ಪ್ರಾಧಿಕಾರ | 3079 | 2449 | 575 | 55 | - |
| 4. | ಸುಳ್ಯ ಯೋಜನಾ ಪ್ರಾಧಿಕಾರ | 173 | 95 | 44 | 17 | |
| 5. | ಮೂಡಬಿದ್ರೆ ಯೋಜನಾ ಪ್ರಾಧಿಕಾರ | 2378 | 1105 | 432 | 822 | 19 |

## ಉಡುಪಿ ಜಿಲ್ಲೆ

| ಕ್ರ. ಸಂ. | ಕಛೇರಿಗಳ ಹೆಸರು | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಅನುಮೋದನೆ ನೀಡಿರುವ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ |
|---|---|---|---|---|---|---|
| 1. | ಸಹಾಯಕ ನಿರ್ದೇಶಕರ ಕಛೇರಿ | 1691 | 1054 | 224 | 388 | 25 |
| 2. | ಕಾಪು ಯೋಜನಾ ಪ್ರಾಧಿಕಾರ | 1993 | 1113 | - | 336 | 59 |
| 3. | ಕುಂದಾಪುರ ಯೋಜನಾ ಪ್ರಾಧಿಕಾರ | 1945 | 1897 | - | - | 48 |

## ಅನುಬಂಧ-2

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಟ್ಟಡ ನಕ್ಷೆಗೆ ಸಂಬಂಧಿಸಿದಂತೆ ನಿರ್ವಹಿಸಿದ ಒಟ್ಟು ಕಡತಗಳು, ತಿರಸ್ಕರಿಸಿದ ಕಡತಗಳು ಹಾಗೂ ವಿಲೆವಾರಿಗೆ ಬಾಕಿಯಿರುವ ಕಡತಗಳ ಸಂಖ್ಯೆಯ ವಿವರಗಳು:**

**ದಕ್ಷಿಣ ಕನ್ನಡ ಜಿಲ್ಲೆ**

| ಕ್ರ. ಸಂ. | ಕಛೇರಿಗಳ ಹೆಸರು | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಅನುಮೋದನೆ ನೀಡಿರುವ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ |
|---|---|---|---|---|---|---|
| 1. | ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | 135 | 108 | 06 | 10 | 11 |
| 2. | ಪುತ್ತೂರು ಯೋಜನಾ ಪ್ರಾಧಿಕಾರ | 149 | 85 | 05 | 10 | 49 |
| 3. | ಬಂಟ್ವಾಳ ಯೋಜನಾ ಪ್ರಾಧಿಕಾರ | 400 | 300 | 50 | 50 | - |
| 4. | ಸುಳ್ಯ ಯೋಜನಾ ಪ್ರಾಧಿಕಾರ | - | - | - | - | - |
| 5. | ಮೂಡಬಿದ್ರೆ ಯೋಜನಾ ಪ್ರಾಧಿಕಾರ | 146 | 49 | 13 | 42 | 42 |

## ಉಡುಪಿ ಜಿಲ್ಲೆ

| ಕ್ರ. ಸಂ. | ಕಛೇರಿಗಳ ಹೆಸರು | ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ | ಅನುಮೋದನೆ ನೀಡಿರುವ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಹಿಂಬರಹ ನೀಡಿರುವ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ |
|---|---|---|---|---|---|---|
| 1. | ಸಹಾಯಕ ನಿರ್ದೇಶಕರ ಕಛೇರಿ | 166 | 108 | 10 | 40 | 08 |
| 2. | ಕಾಪು ಯೋಜನಾ ಪ್ರಾಧಿಕಾರ | 20 | 20 | - | - | - |
| 3. | ಕುಂದಾಪುರ ಯೋಜನಾ ಪ್ರಾಧಿಕಾರ | 42 | 28 | - | - | 14 |

ಅನುಬಂಧ-3

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ನಗರ ಯೋಜನಾ ಪ್ರಾಧಿಕಾರದ ಕಛೇರಿಗಳಿಗಾಗಿ ಸೃಜಿಸಲಾಗಿರುವ ಸಿಬ್ಬಂದಿ ವಿವರಗಳು:

ದಕ್ಷಿಣ ಕನ್ನಡ ಜಿಲ್ಲೆ

| ಕ್ರ. ಸಂ | ಕಛೇರಿಯ ಹೆಸರು | ಮಂಜೂರಾಗಿರುವ ಹುದ್ದೆಗಳು | | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| | | ಪದನಾಮ | ಸಂಖ್ಯೆ | | | |
| 1 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು | 01 | 01 | - | ವಾಹನಚಾಲಕರ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. ಪ್ರಥಮ ದರ್ಜೆ ಸಹಾಯಕರ ಕೆಲಸಗಲ ನಿರ್ವಹಣೆಗೆ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿಯೋಜನೆ ಮೇರೆಗೆ ಸೇವೆಯನ್ನು ಒದಗಿಸಲಾಗಿದೆ. |
| | | ನಗರ ಯೋಜಕರು | 02 | 02 | - | |
| | | ಸಹಾಯಕ ನಗರ ಯೋಜಕರು | 03 | 02 | 01 | |
| | | ಅಧೀಕ್ಷರು | 01 | 01 | - | |
| | | ಪ್ರಥಮ ದರ್ಜೆ ಸಹಾಯಕರು | 01 | - | 01 | |
| | | ಬೆರಳಚ್ಚುಗಾರರು | 01 | - | 01 | |
| | | ಡಿ ಗ್ರೂಪ್ | 02 | - | 02 | |
| 2 | ಪುತ್ತೂರು ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | 01 | - | ದ್ವಿತೀಯ ದರ್ಜೆ ಸಹಾಯಕರು, ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 4 | ಬಂಟ್ವಾಳ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | 01 | - | 01 ಸಹಾಯಕ ನಗರ ಯೋಜಕರನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಇಂದ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ. ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ಸಹಾಯಕ ನಗರ ಯೋಜಕರು | 01 | - | 01 | |
| 5 | ಮೂಡಬಿದ್ರೆ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು |

| | | | | | | |
|---|---|---|---|---|---|---|
| | | | | | | ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ಯೋಜಕರನ್ನು ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ.<br>ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 6 | ಸುಳ್ಯ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರು, ಮಂಗಳೂರು ಇವರನ್ನು ಅಧಿಕ ಪ್ರಭಾರದಲ್ಲಿರಿಸಲಾಗಿದೆ ಹಾಗೂ ನಗರ ಯೋಜಕರನ್ನು ಸಹಾಯಕ ನಿರ್ದೇಶಕರ ಕಛೇರಿ, ಮಂಗಳೂರು ಇಂದ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿದೆ. |

# ಉಡುಪಿ ಜಿಲ್ಲೆ

| ಕ್ರ. ಸಂ | ಕಛೇರಿಯ ಹೆಸರು | ಮಂಜೂರಾಗಿರುವ ಹುದ್ದೆಗಳು | | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|---|
| | | ಪದನಾಮ | ಸಂಖ್ಯೆ | | | |
| 1 | ಕಾಪು ಯೋಜನಾ ಪ್ರಾಧಿಕಾ ರ | ಸದಸ್ಯ ಕಾರ್ಯದರ್ಶಿ | 01 | - | 01 | ಸದಸ್ಯ ಕಾರ್ಯದರ್ಶಿ ಹುದ್ದೆಗೆ ಸಹಾಯಕ ನಿರ್ದೇಶಕರು, ಕೆ.ಎಸ್.ಟಿ.ಪಿ.ಬಿ ಇಂದ ಅನ್ಯ ಕರ್ತವ್ಯದ ಮೇಲೆ ಪ್ರಭಾರದಲ್ಲಿರಿಸಲಾಗಿದೆ. ನಗರ ಯೋಜಕರನ್ನು ಸರ್ಕಾರ ನೇಮಿಸಿದ್ದು ಹುದ್ದೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| 2 | ಕುಂದಾಪುರ ಯೋಜನಾ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ | 01 | 01 | - | ಡಿ ಗ್ರೂಪ್ ಹಾಗೂ ಬೆರಳಚ್ಚುಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ನಗರ ಯೋಜಕರು | 01 | 01 | - | |
| | | ದ್ವಿತೀಯ ದರ್ಜೆ ಸಹಾಯಕರು | 01 | - | 01 | |
| | | ಬೆರಳಚ್ಚುಗಾರರು | 01 | - | 01 | |
| | | ಡಿ ಗ್ರೂಪ್ | 01 | - | 01 | |
| 3 | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ. | ಸಹಾಯಕ ನಿರ್ದೇಶಕರು | 01 | 01 | - | |
| | | ನಗರ ಯೋಜಕರು | 02 | 02 | - | 01 ನಗರ ಯೋಜಕರು ಇವರ ಸೇವೆಯನ್ನು ಅನ್ಯ ಕರ್ತವ್ಯದ ಮೇಲೆ ಸ.ನಿ ಕಾರವಾರ ಕಚೇರಿಗೆ ನೀಡಲಾಗಿದೆ.<br>01 ನಗರ ಯೋಜಕರು ಇವರು ಅನ್ಯ ಕರ್ತವ್ಯದ ಮೇಲೆ ವಾರದಲ್ಲಿ 01 ದಿನ ಕುಂದಾಪುರ ಯೋಜನಾ ಪ್ರಾಧಿಕಾರ. |
| | | ಸಹಾಯಕ ನಗರ ಯೋಜಕರು | 03 | 02 | 01 | 01 ಸಹಾಯಕ ನಗರ ಯೋಜಕರು ನಿಯೋಜನೆ ಮೇರೆಗೆ ತುಮಕೂರು ಕಛೇರಿಯಲ್ಲಿ ಕಾರ್ಯ |

| | | | | | | |
|---|---|---|---|---|---|---|
| | | | | | | ನಿರ್ವಹಿಸುತ್ತಿದ್ದಾರೆ.<br>01 ಸಹಾಯಕ ನಗರ ಯೋಜಕರು ನಿಯೋಜನೆ ಮೇರೆಗೆ ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. |
| | | ಛಾಯಾ ಮುದ್ರಕರು | 01 | - | 01 | ಇಲಾಖೆಯಲ್ಲಿ ಛಾಯಾ ಮುದ್ರಕರ ವೃಂದದಲ್ಲಿ ಯಾವುದೇ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿಲ್ಲ ಕಾರಣ ಸದರಿ ಹುದ್ದೆಯನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. |
| | | ಪ್ರಥಮ ದರ್ಜೆ ಸಹಾಯಕರು | 01 | 01 | - | |
| | | ಬೆರಳಚ್ಚುಗಾರರು | 01 | - | 01 | ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. |
| | | ವಾಹನ ಚಾಲಕರು | 01 | 01 | - | |
| | | ಸೇವಕರು | 04 | 01 | 03 | |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.